89630
9/11/15

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಏಪ್ರಿಲ್-2016ನೇ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ರಾಜ್ಯದ ಅಧಿಕೃತ ಖಾಸಗಿ ಪ್ರೌಢಶಾಲೆಗಳಿಂದ 25 ಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳನ್ನು ಶಾಲಾ ಅಭ್ಯರ್ಥಿಗಳನ್ನಾಗಿ ಪರಿಗಣಿಸುವ ಕುರಿತು

ಓದಲಾಗಿದೆ: ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಇವರ ಪ್ರಸ್ತಾವನೆ ಸಂಖ್ಯೆ : ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ./ಅಧಿಸೂಚನೆ/ಏಪ್ರಿಲ್-2016/2015-16, ದಿನಾಂಕ : 16.09.2015.

ಪ್ರಸ್ತಾವನೆ :

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಏಪ್ರಿಲ್-2016ನೇ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ರಾಜ್ಯದ ಅಧಿಕೃತ ಖಾಸಗಿ ಪ್ರೌಢಶಾಲೆಗಳಿಂದ 25 ಕ್ಕಿಂತ ಕಡಿಮೆಯಿರುವ ವಿದ್ಯಾರ್ಥಿಗಳನ್ನು ಶಾಲಾ ಅಭ್ಯರ್ಥಿಗಳನ್ನಾಗಿ ಪರಿಗಣಿಸುವ ಕುರಿತು The Karnataka Educational institutions (Recognition of Primary and Secondary schools) Rules, 1999ರ ನಿಯಮ-4ರ ಉಪ ನಿಯಮ-(1)(k)ರಲ್ಲಿ "..has maintained a minimum strength of 40 students in respect of lower primary, 100 students in respect of upper primary schools and 25 students in each standard in respect of high schools" ಹಾಗೂ The Karnataka Educational Institutions (Classification, Regulation and Prescription of Curricula, Etc) Rules, 1995ರ ನಿಯಮ-13(b)ರಲ್ಲಿ "For secondary schools the minimum admission shall be thirty students and the maximum admission shall be sixty in each class" ಎಂದು ಇರುತ್ತದೆ.

Rules of thé schemes of the Karnataka SSLC examination ನಿಯಮ-6Aರಲ್ಲಿ Every recognized institution including government high school shall invariably register their institutions in the registers of the Karnataka Secondary Education Examination Board and obtain school code by submitting necessary documents that may be prescribed by the board from time to time. Institutions not getting school code shall not be eligible to send the applications of their students to enroll for the SSLC Examinations. Application to obtain the school code along with the prescribed fees shall be submitted to the SSLC Examination board before 31st July every year ಎಂದಿರುವುದಾಗಿ ಪ್ರಸ್ತಾಪಿಸುತ್ತಾ, ಖಾಸಗಿ ಶಾಲೆಗಳಲ್ಲಿನ 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ 25ಕ್ಕಿಂತ ಕಡಿಮೆ ಇದ್ದು, 2015-16ನೇ ಸಾಲಿನ ಮಾನ್ಯತೆ ನವೀಕರಣ ಪಡೆದು ಶಾಲಾ ಸಂಕೇತ ನೀಡುವ ಕುರಿತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಮೂಲಕ ಮಾರ್ಗದರ್ಶನ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 324 ಎಸ್‌ಎಲ್‌ಬಿ 2015,**

**ಬೆಂಗಳೂರು, ದಿನಾಂಕ : 29ನೇ ಅಕ್ಟೋಬರ್ 2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿಗೆ ಮಾನ್ಯತೆ ಪಡೆದ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕನಿಷ್ಠ 25 ಕ್ಕಿಂತ ಕಡಿಮೆ ಇದ್ದರೂ ಸಹ ವಿದ್ಯಾರ್ಥಿಗಳ ಶೈಕ್ಷಣಿಕ

ಹಿತದೃಷ್ಟಿಯಿಂದ ಇಂತಹ ಶಾಲೆಗಳಿಗೆ ಪ್ರಸ್ತುತ 2015–16ನೇ ಸಾಲಿಗೆ ಶಾಲಾ ಸಂಕೇತ ನೀಡಿ, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸಿದೆ.

2. ಖಾಸಗಿ ಪ್ರೌಢಶಾಲೆಗಳಲ್ಲಿ 10ನೇ ತರಗತಿಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕನಿಷ್ಠ 25 ಕ್ಕಿಂತ ಕಡಿಮೆ ಇರುವ ಪ್ರೌಢ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿ, ಸಂಬಂಧಿಸಿದ ವಿಭಾಗಗಳಿಗನುಗುಣವಾಗಿ ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಅಪರ ಆಯುಕ್ತಾಲಯ, ಧಾರವಾಡ ಮತ್ತು ಕಲಬುರಗಿ ಇವರುಗಳಿಗೆ ಸಲ್ಲಿಸುವುದು. ಇಂತಹ ಶಾಲೆಗಳಿಗೆ ಒಂದು ಬಾರಿ ವಿಚಾರಣೆಗೆ ಅವಕಾಶ ನೀಡಿ (Opportunity of hearing) 2016–17ನೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ 9ನೇ ತರಗತಿಯ ಮಾನ್ಯತೆಯನ್ನು ರದ್ದುಗೊಳಿಸಲು (de-recognize) ಕರ್ನಾಟಕ ಶಿಕ್ಷಣ ಕಾಯ್ದೆ-1983ರ ನಿಯಮ-39 ರನ್ವಯ ಕ್ರಮ ತೆಗೆದುಕೊಳ್ಳತಕ್ಕದ್ದು.

3. 2016–17ನೇ ಸಾಲಿಗೆ ಪ್ರತಿ ತರಗತಿಗೆ ಕನಿಷ್ಠ 25 ವಿದ್ಯಾರ್ಥಿಗಳ ಸಂಖ್ಯಾ ಬಲವನ್ನು ವಿಶ್ವಾಸಯೋಗ್ಯ ಭರವಸೆ ನೀಡಿ ಉತ್ತಮಪಡಿಸಿಕೊಳ್ಳಲು ವಿಫಲವಾದ ಶಾಲೆಗಳ ಮಾನ್ಯತೆ ರದ್ದುಪಡಿಸತಕ್ಕದ್ದು, ಅಂತಹ ಮಾನ್ಯತೆ ರದ್ದುಗೊಂಡಂತಹ ಶಾಲೆಗಳು 2016–17ನೇ ಶೈಕ್ಷಣಿಕ ವರ್ಷದಿಂದ 9ನೇ ತರಗತಿಗೆ ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಳ್ಳುವಂತಿಲ್ಲ. ಆದಾಗ್ಯೂ ಅಂತಹ ಶಾಲೆಗಳಲ್ಲಿ 2015–16ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 9ನೇ ತರಗತಿಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ 2016–17ನೇ ಸಾಲಿನ 10ನೇ ತರಗತಿಯ ಪರೀಕ್ಷೆಯಲ್ಲಿ ಭಾಗವಹಿಸಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು ಎಲ್ಲಾ ಶಾಲೆಗಳ ವಿದ್ಯಾರ್ಥಿಗಳ ಜೊತೆಯಲ್ಲಿ ಅವಕಾಶ ಮಾಡಿಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

[ಎಂ.ಗಣೇಶ]
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ)

ರವರಿಗೆ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
3. ನಿರ್ದೇಶಕರು, ಪ್ರೌಢಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
5. ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳಿಗೆ ಆಯುಕ್ತರು/ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳ ಮುಖಾಂತರ.
6. ಹೆಚ್ಚುವರಿ/ಶಾಖಾ ರಕ್ಷಾ ಪ್ರತಿ.